ವಿಜಯ ಕರ್ನಾಟಕ

# ಆಪ್ಟಿಟ್ಯೂಡ್ ಟೆಸ್ಟ್ ತಯಾರಿ

**ಕ್ಯಾಂಪಸ್ ಸೆಲೆಕ್ಷನ್‌ಗೆ ಬರುವ ಕಂಪನಿಗಳು, ನಿಮ್ಮ ಸಾಮರ್ಥ್ಯ, ವೃತ್ತಿಯ ಒಲವು, ವ್ಯಕ್ತಿತ್ವ ಇತ್ಯಾದಿಗಳನ್ನು ಆಪ್ಟಿಟ್ಯೂಡ್ ಟೆಸ್ಟ್ ಮುಖಾಂತರ ಪರೀಕ್ಷಿಸಲಾಗುತ್ತದೆ. ಆಪ್ಟಿಟ್ಯೂಡ್ ಟೆಸ್ಟ್‌ಗಳ ಪ್ರಶ್ನೆಪತ್ರಿಕೆಗಳು, ಗೈಡ್ ಇತ್ಯಾದಿಗಳು ಮಾರುಕಟ್ಟೆಯಲ್ಲೂ, ಇಂಟರ್ನೆಟ್‌ನಲ್ಲೂ ಸಿಗುತ್ತದೆ.**



**ವಿ.ಪ್ರದೀಪ್‌ಕುಮಾರ್**

**ಉದ್ಯೋಗದ ಸಿದ್ಧತೆ**

ನೀವು ವಿದ್ಯಾಭ್ಯಾಸದ ಅಂತಿಮ ಘಟ್ಟದಲ್ಲಿದ್ದು ಪ್ರಖ್ಯಾತ ಕಂಪನಿಗಳ ಕ್ಯಾಂಪಸ್ ಸೆಲೆಕ್ಷನ್‌ನ ನಿರೀಕ್ಷೆಯಲ್ಲಿದ್ದೀರಾ?

ಎಲ್ಲ ಪ್ರತಿಷ್ಠಿತ ಕಂಪನಿಗಳೂ ಆಪ್ಟಿಟ್ಯೂಡ್ ಟೆಸ್ಟ್‌ನ್ನು ಮೊದಲು ನಡೆಸಿ, ಪಾಸಾದ ಅಭ್ಯರ್ಥಿಗಳ ಅರ್ಹತೆಯನ್ನು ಮುಂದಿನ-ಸಾಮೂಹಿಕ ಚರ್ಚೆ ಮತ್ತು ವೈಯಕ್ತಿಕ ಸಂದರ್ಶನ ಹಂತದಲ್ಲಿ ನಿರ್ಣಯಿಸುತ್ತಾರೆ.

### ಆಪ್ಟಿಟ್ಯೂಡ್ ಟೆಸ್ಟ್ ಉದ್ದೇಶ, ರಚನೆ

ನಿಮ್ಮ ಅಭಿರುಚಿ ಮತ್ತು ಸಾಮರ್ಥ್ಯದ ಅರಿವೇ ಸೂಕ್ತವಾದ ವೃತ್ತಿಯನ್ನು ಆರಿಸುವುದರಲ್ಲಿ ಮಾರ್ಗದರ್ಶಿ. ಕ್ಯಾಂಪಸ್ ಸೆಲೆಕ್ಷನ್‌ಗೆ ಬರುವ ಕಂಪನಿಗಳು ನಿಮ್ಮ ಸಾಮರ್ಥ್ಯ, ವೃತ್ತಿಯ ಒಲವು, ವ್ಯಕ್ತಿತ್ವ ಇತ್ಯಾದಿಗಳನ್ನು ಆಪ್ಟಿಟ್ಯೂಡ್ ಟೆಸ್ಟ್ ಮುಖಾಂತರ ಪರೀಕ್ಷಿಸಿ, ನಿಮ್ಮ ಯೋಗ್ಯತೆ ಮತ್ತು ಸಫಲತೆಯ ಸಾಧ್ಯತೆಯನ್ನು ಅಂದಾಜು ಮಾಡುತ್ತಾರೆ.

ಉದಾಹರಣೆಗೆ, ನೀವು ಯಾವಾಗಲೂ ಉಲ್ಲಾಸದಿಂದಿದ್ದು ಎಲ್ಲರೊಂದಿಗೂ ಸಂಕೋಚವಿಲ್ಲದೆ ಮಾತನಾಡುವ ಚಾಕಚಕ್ಯತೆಯಿದ್ದರೆ, ಮಾರ್ಕೆಟಿಂಗ್ ವೃತ್ತಿಯಲ್ಲಿ ಸಫಲತೆಯನ್ನು ಕಾಣಬಹುದು. ಸಂಶೋಧನೆಯಲ್ಲಿ ಆಸಕ್ತಿಯಿದ್ದಲ್ಲಿ, ತಾರ್ಕಿಕ ಸಾಮರ್ಥ್ಯದ ಜತೆ ಏಕಾಗ್ರತೆಯೂ, ವೈಫಲ್ಯಗಳ ನಡುವೆ ಛಲದಿಂದ ಮುಂದುವರಿಯುವ ದೃಢತೆಯೂ ಇರಬೇಕು.

ಆಪ್ಟಿಟ್ಯೂಡ್ ಟೆಸ್ಟ್‌ಗಳಲ್ಲಿ ವಿಷಯ ಪರಿಣತಿ, ಇಂಗ್ಲಿಷ್ ಪರಿಣತಿ, ಸಂವಹನ ಕೌಶಲ, ತಾರ್ಕಿಕ ಆಲೋಚನಾ ಮತ್ತು ಕಲ್ಪನಾ ಶಕ್ತಿ, ಬೌದ್ಧಿಕ ಸಾಮರ್ಥ್ಯ, ಸಂಖ್ಯಾ ಮತ್ತು ಪದಗ್ರಹಿಕೆ, ವರ್ಗೀಕರಣ, ಮನೋಭಾವ, ಸ್ವಭಾವ, ನಡವಳಿಕೆ, ವಿಶ್ವಾಸಾರ್ಹತೆ ಇತ್ಯಾದಿಗಳನ್ನು ಪರೀಕ್ಷಿಸುವ ಪ್ರಶ್ನೆಗಳಿರುತ್ತವೆ. ಮುಖ್ಯ ವಿಭಾಗಗಳಲ್ಲಿ ಕಡ್ಡಾಯವಾಗಿ ಇಂತಿಷ್ಟೇ ಅಂಕಗಳನ್ನು ಗಳಿಸಬೇಕೆನ್ನುವ ಮತ್ತು ಒಟ್ಟಾರೆ ಕಟ್ ಆಫ್ ಅಂಕಗಳ ಮಾಹಿತಿಯನ್ನೂ ತಿಳಿಯಿರಿ.

### ಆಪ್ಟಿಟ್ಯೂಡ್ ಟೆಸ್ಟ್ ತಯಾರಿ ಹೇಗೆ?

ಪರೀಕ್ಷೆಯ ವಿನ್ಯಾಸವನ್ನು ಅರಿತು, ಅಭ್ಯಾಸ ನಿರಂತರವಾಗಿರಲಿ. ವ್ಯಾಕರಣದ ಕೌಶಲವನ್ನು ತೀಕ್ಷ್ಣಗೊಳಿಸಿ. ಪತ್ರಿಕೆಗಳು, ಇಂಟರ್ನೆಟ್, ಟಿವಿ ವಾಹಿನಿಗಳ ಶಿಕ್ಷಣ ಸಂಬಂಧಿತ ಕಾರ್ಯಕ್ರಮಗಳ ಮೂಲಕ ಸಾಮಾನ್ಯ ಜ್ಞಾನವನ್ನು ವೃದ್ಧಿಸಿಕೊಳ್ಳಿ.

ಟೆಸ್ಟ್‌ಗೆ ಮುಂಚಿತವಾಗಿ, ಆಯಾ ಕಂಪನಿಗಳ ಸೆಲೆಕ್ಷನ್ ಪ್ರಕ್ರಿಯೆ ಮತ್ತು ಪ್ರಶ್ನೆಪತ್ರಿಕೆಗಳ ವಿನ್ಯಾಸವನ್ನು ಗಮನಿಸಿ, ಪ್ರಶ್ನೆಗಳಿಗೂ, ಒಟ್ಟು ಸಮಯಕ್ಕೂ ತುಲನೆ ಮಾಡಿ ಸೂಕ್ತವಾದ ತಂತ್ರವನ್ನು ರೂಪಿಸಿಕೊಳ್ಳಿ. ಆಪ್ಟಿಟ್ಯೂಡ್ ಟೆಸ್ಟ್‌ಗಳ ಪ್ರಶ್ನೆಪತ್ರಿಕೆಗಳು, ಗೈಡ್ ಇತ್ಯಾದಿಗಳು ಮಾರುಕಟ್ಟೆಯಲ್ಲೂ, ಇಂಟರ್ನೆಟ್‌ನಲ್ಲೂ ಸಿಗುತ್ತದೆ. ಈ ಟೆಸ್ಟ್‌ಗಳನ್ನು ವೈಯಕ್ತಿಕವಾಗಿ ಅಥವಾ ಸಹಪಾಠಿಗಳೊಂದಿಗೆ 4-5 ಬಾರಿ ಪ್ರಾಕ್ಟೀಸ್ ಮಾಡುವುದರಿಂದ ಪ್ರಶ್ನೆಪತ್ರಿಕೆಗಳ ಪರಿಚಯವಾಗಿ ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚುತ್ತದೆ.

### ಟೆಸ್ಟ್‌ನ ದಿನ

ಟೆಸ್ಟ್‌ನ ದಿನದಂದು ಉದ್ವೇಗ, ಆತಂಕಗಳಿಲ್ಲದೆ, ಮಾನಸಿಕ ಸಮತೋಲನ ಮತ್ತು ಆತ್ಮವಿಶ್ವಾಸದಿಂದಿರಲು ಪ್ರಯತ್ನಿಸಿ. ಇದರಿಂದ ನಿಮ್ಮ ಕಾರ್ಯಕ್ಷಮತೆ ಹೆಚ್ಚುತ್ತದೆ. ನೀವು ಮೊದಲೇ ರೂಪಿಸಿಕೊಂಡಿರುವ ಕಾರ್ಯತಂತ್ರವನ್ನು ನಿಷ್ಠೆಯಿಂದ ಟೆಸ್ಟ್‌ನಲ್ಲಿ ಪರಿಪಾಲಿಸಿ. ನೀವು ಯಾವ ವಿಭಾಗದಲ್ಲಿ ಹೆಚ್ಚು ಪರಿಣಿತರೋ, ಮೊದಲು ಅಲ್ಲಿನ ಎಲ್ಲ ಪ್ರಶ್ನೆಗಳನ್ನು ಉತ್ತರಿಸಿ; ನಂತರ ಬೇರೆ ವಿಭಾಗಗಳಿಗೆ ಆದ್ಯತೆಯಂತೆ ಗಮನ ಹರಿಸಿ.

ಆದರೆ, ಉತ್ತರ ಗೊತ್ತಿಲ್ಲದ ಅನೇಕ ಪ್ರಶ್ನೆಗಳಿದ್ದರೆ ಸಾಮಾನ್ಯವಾಗಿ, ಇಂತಹ ಪರೀಕ್ಷೆಗಳಲ್ಲಿ ನೆಗೆಟಿವ್ ಅಂಕಗಳಿರುತ್ತವೆ. ಹಾಗೆಂದು, ಬಹಳಷ್ಟು ಪ್ರಶ್ನೆಗಳನ್ನು ಬಿಡುವುದೂ ಸಮಂಜಸವಲ್ಲ. ಆದ್ದರಿಂದ, ವಾಡಿಕೆಯಂತಿರುವ ನಾಲ್ಕು ಆಯ್ಕೆಗಳಲ್ಲಿ, ಕನಿಷ್ಠ ಎರಡನ್ನಾದರೂ ತಿರಸ್ಕರಿಸಿ, ಉಳಿದ ಎರಡರಲ್ಲಿ 'ಇಂಟೆಲಿಜೆಂಟ್ ಗೆಸ್' ಮಾಡಬಹುದು.

### ಯಶಸ್ಸಿನ ಸೂತ್ರಗಳು

ಕ್ಯಾಂಪಸ್‌ಗೆ ಬರುವ ಕಂಪನಿಗಳು, ಉದ್ದಿಮೆಗಳು ಉನ್ನತ ಶ್ರೇಣಿಯಲ್ಲಿದ್ದು, ನಿಮ್ಮ ವೃತ್ತಿ ಜೀವನವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಅತ್ಯುತ್ತಮ ತರಬೇತಿ, ಪ್ಯಾಕೇಜ್ ಮತ್ತು ಸೌಲಭ್ಯಗಳು ಲಭ್ಯವಾಗಿ, ನೀವು ವೃತ್ತಿಯಲ್ಲಿನ ಯಶಸ್ಸನ್ನು ಶೀಘ್ರವಾಗಿ ಪಡೆಯಬಹುದು. ನಿಮ್ಮ ಮುಂದಿರುವ ಕ್ಯಾಂಪಸ್ ಸೆಲೆಕ್ಷನ್‌ನಂತಹ ಅವಕಾಶಗಳೇ, ವೃತ್ತಿ ಜೀವನದ ಯಶಸ್ಸಿಗೆ ಏಣಿಯಿದ್ದಂತೆ. ಅದರ ಮೊದಲ ಮೆಟ್ಟಿಲೇ, ಆಪ್ಟಿಟ್ಯೂಡ್ ಟೆಸ್ಟ್ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳು.

### ಯಶಸ್ಸಿನ ಸೂತ್ರಗಳು

- ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನಿಸಿ, ಕಾರ್ಯತಂತ್ರವನ್ನು ರೂಪಿಸಿ.
- ಮನಸ್ಸಿನಲ್ಲಿಯೇ ಲೆಕ್ಕಾಚಾರ 'ಮೆಂಟಲ್ ಮ್ಯಾಥಮೆಟಿಕ್ಸ್' ಹಾಕುವುದನ್ನು ಅಭ್ಯಸಿಸಿ.
- ಟೆಸ್ಟ್ ದಿನದಂದು, ಸಮಾಧಾನದಿಂದಲೂ, ಆಶಾಭಾವನೆಯಿಂದಲೂ ಇರಬೇಕು.
- ಟೆಸ್ಟ್ ಸಭಾಂಗಣದಲ್ಲಿ ನಿರ್ವಾಹಕರ ಸೂಚನೆಗಳನ್ನು ಗಮನವಿಟ್ಟು ಕೇಳಿ.
- ಪ್ರಶ್ನೆಪತ್ರಿಕೆಯಲ್ಲಿನ 'ಮುದ್ರಿತ ಅಥವಾ ಆನ್ ಲೈನ್' ಸೂಚನೆಗಳನ್ನು ನಿಧಾನವಾಗಿ ಓದಿ.
- ಪ್ರಶ್ನೆಪತ್ರಿಕೆಯಲ್ಲಿನ ವಿಭಾಗಗಳನ್ನು ಗಮನಿಸಿ. ಪ್ರಶ್ನೆಗಳ ಸಂಖ್ಯೆಗೂ, ಸಮಯಕ್ಕೂ ತುಲನೆ ಮಾಡಿ.
- ಯಾವ ವಿಭಾಗದಲ್ಲಿ ನೀವು ಹೆಚ್ಚು ಸಮರ್ಥರೋ, ಅಲ್ಲಿಂದಲೇ ಆರಂಭಿಸಿ.
- ನೀವು ಹಾದಿ ತಪ್ಪುವಂತೆ ಮಾಡುವ ಜಾಣತನದ ಪ್ರಶ್ನೆಗಳ ಬಗ್ಗೆ ಎಚ್ಚರವಿರಲಿ.
- ಮನೋಭಾವ, ಅಭಿರುಚಿಯನ್ನು ಅರಿಯುವ ಪ್ರಶ್ನೆಗಳನ್ನು ಪ್ರಾಮಾಣಿಕವಾಗಿ ಉತ್ತರಿಸಿ. ■